# ತುಮಕೂರು ಜಿಲ್ಲೆಯ ಕಾಂಗ್ರೆಸ್ಸೇತರ ರಾಜಕಾರಣದಲ್ಲಿ ಸಮಾಜವಾದಿ ಚಿಂತನೆಗಳ ಪ್ರಭಾವ

**ಪಿ. ಎಲ್. ಮೈಲಾರಯ್ಯ**
ಸಂಶೋಧನಾ ವಿದ್ಯಾರ್ಥಿ
ಇತಿಹಾಸ ಅಧ್ಯಯನ ವಿಭಾಗ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು.

Article Link: https://aksharasurya.com/2024/04/mylaraiah-p-l.php

DOI: https://doi.org/10.5281/zenodo.10929706

## ABSTRACT:

ಭಾರತದ ಇತಿಹಾಸದ ಪುಟಗಳನ್ನು ಒಮ್ಮೆ ಪರಿಶೀಲಿಸಿದಾಗ ನಮಗೆ ಸ್ವಾತಂತ್ರ್ಯ ಹೋರಾಟದ ಹಾದಿಯಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಪಾತ್ರವು ಬಹಳ ಮುಖ್ಯವಾದುದಾಗಿದೆ. ಕಾಂಗ್ರೆಸ್ ಎಂಬ ರಾಜಕೀಯ ಸಂಸ್ಥೆಯು ಭಾರತದ ಸ್ವತಂತ್ರ ಹೋರಾಟದಲ್ಲಿ ಒಂದು ಬಹುಮುಖ್ಯ ಅಂಗವಾಗಿ ಪಾತ್ರ ನಿರ್ವಹಿಸಿತ್ತು. ಕಾಂಗ್ರೆಸ್ ಸ್ವತಂತ್ರ ನಂತರ ಒಂದು ರಾಜಕೀಯ ಪಕ್ಷವಾಗಿ ಮುಂದುವರೆದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಅಧಿಕಾರವನ್ನು ಪಡೆದುಕೊಂಡಿತ್ತು. ಆರಂಭದ ಸುಮಾರು 40 ವರ್ಷಗಳ ಕಾಲ ಭಾರತದ ರಾಜಕೀಯ ಇತಿಹಾಸವನ್ನು ಕಾಂಗ್ರೆಸ್ ಆವರಿಸಿತ್ತು. ಕರ್ನಾಟಕದ ರಾಜಕೀಯದಲ್ಲೂ ಸಹ ಕಾಂಗ್ರೆಸ್ ತನ್ನದೇ ಪ್ರಭಾವವನ್ನು ಬೀರಿತ್ತು. ಕಾಲಕ್ರಮೇಣ ಕಾಂಗ್ರೆಸ್ಸೇತರ ರಾಷ್ಟ್ರೀಯ ಪಕ್ಷಗಳು, ಪ್ರಾದೇಶಿಕ ಪಕ್ಷಗಳು ಕೆಲವು ರಾಜ್ಯಗಳಲ್ಲಿ ಅಧಿಕಾರದ ಚುಕ್ಕಾಣಿ ಹಿಡಿದವು. ಅಂತಹ ರಾಷ್ಟ್ರೀಯ ಪಕ್ಷಗಳಲ್ಲಿ ಜನತಾ ಪಕ್ಷ, ಕಮ್ಯುನಿಷ್ಟ್ ಪಕ್ಷ, ಸಮಾಜವಾದಿ ಪಕ್ಷಗಳು ಪ್ರಮುಖವಾಗಿದ್ದವು. ಕಾಂಗ್ರೆಸ್ ಪಕ್ಷದ ಸೌರ್ವಭೌಮತ್ವವನ್ನು ಪ್ರಶ್ನಿಸಿ ಪ್ರಬಲವಾದ ವಿರೋಧಿ ಬಣವು ಅಸ್ತಿತ್ವಕ್ಕೆ ಬಂದಿತ್ತು. ಇದರಲ್ಲಿ ಸಮಾಜವಾದಿ ಚಿಂತನೆಗಳು ಮತ್ತು ಚಿಂತಕರು ಅಗಾಧವಾದ ಪ್ರಭಾವವನ್ನು ಬೀರಿದರು. ಇಂತಹ ಹಿನ್ನೆಲೆ ತುಮಕೂರು ಜಿಲ್ಲೆಯಲ್ಲಿ ಕಾಂಗ್ರೆಸ್ಸೇತರ ರಾಜಕಾರಣದ ಹುಟ್ಟು, ಬೆಳವಣಿಗೆಯಲ್ಲಿ ಸಮಾಜವಾದಿ ಚಿಂತನೆಗಳ ಪಾತ್ರವನ್ನು ನಿರೂಪಿಸುವುದು ಈ ಲೇಖನದ ಆಶಯವಾಗಿದೆ.

## KEYWORDS:

ಸಮಾಜವಾದ, ಕಾಂಗ್ರೆಸ್, ಕಮ್ಯುನಿಸ್ಟ್ ಪಕ್ಷ, ಸಾರ್ವಭೌಮತ್ವ, ಸಾಮಾಜಿಕ ನ್ಯಾಯ.

ಸ್ವಾತಂತ್ರ್ಯಪೂರ್ವದ ಭಾರತದಲ್ಲಿ ಮಾರ್ಕ್ಸ್ ಮತ್ತು ಸಮಾಜವಾದಿ ಚಿಂತಕರ ವಿಚಾರಗಳು ಸಮಾಜವಾದಿಗಳು ಮತ್ತು ಕಮ್ಯುನಿಸ್ಟರಾಗಿ ಅಸ್ತಿತ್ವಕ್ಕೆ ಬರಲು ಅನೇಕ ಗುಂಪುಗಳನ್ನು ಪ್ರೇರೇಪಿಸಿತು. ಈ ಆಲೋಚನೆಗಳು ಜವಾಹರಲಾಲ್ ನೆಹರು ಮತ್ತು ಸುಭಾಷ್ ಚಂದ್ರ ಬೋಸ್‌ರು ಪ್ರತಿನಿಧಿಸುವ ಕಾಂಗ್ರೆಸ್‌ನಲ್ಲಿ ಎಡಪಂಥೀಯ ಸಿದ್ಧಾಂತದ ಬೆಳವಣಿಗೆಗೆ ಕಾರಣವಾಯಿತು. ಇದರಿಂದ ಮುಂಚೂಣಿಗೆ ಬಂದ ಯುವ ರಾಷ್ಟ್ರೀಯವಾದಿಗಳು ರಷ್ಯಾ ಕ್ರಾಂತಿಯಿಂದ ಪ್ರೇರಿತರಾದರು. ಅಂತೆಯೇ ಅವರು ಗಾಂಧೀಜಿಯ ಸೈದ್ಧಾಂತಿಕ ವಿಚಾರಗಳು ಮತ್ತು ರಾಜಕೀಯ ಕಾರ್ಯಕ್ರಮಗಳಿಂದ ಅತೃಪ್ತರಾಗಿದ್ದರು. ಇವರು ದೇಶದ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳಿಗೆ ಮೂಲಭೂತ ಪರಿಹಾರಗಳನ್ನು ಪ್ರತಿಪಾದಿಸಲು ಪ್ರಾರಂಭಿಸಿದರು.

1920ರಲ್ಲಿ ಎಂ.ಎನ್. ರಾಯ್‌ರವರು ತಾಷ್ಕೆಂಟ್‌ನಲ್ಲಿ ಕಮ್ಯುನಿಸ್ಟ್ ಪಾರ್ಟಿ ಆಫ್ ಇಂಡಿಯಾವನ್ನು ಸ್ಥಾಪಿಸಿದರು. ಎಂ.ಎನ್. ರಾಯ್‌ರವರು ಅಂತರ ರಾಷ್ಟ್ರೀಯ ಕಮ್ಯುನಿಸ್ಟ್ ನಾಯಕತ್ವಕ್ಕೆ ಚುನಾಯಿತರಾದ ಮೊದಲ ಭಾರತೀಯರಾಗಿದ್ದರು. 1925ರಲ್ಲಿ ಕಾನ್ಪುರ್‌ನಲ್ಲಿ ಕಮ್ಯುನಿಸ್ಟ್ ಪಕ್ಷವು ಸ್ಥಾಪನೆಯಾಯಿತು. ಅನೇಕ ಕಾರ್ಮಿಕ ಮತ್ತು ರೈತ ಪಕ್ಷಗಳು ದೇಶದ ವಿವಿಧ ಭಾಗಗಳಲ್ಲಿ ಆರಂಭವಾದವು. ಈ ಪಕ್ಷಗಳು ಮತ್ತು ಗುಂಪುಗಳು ಮಾರ್ಕ್ಸ್‌ವಾದಿ ಮತ್ತು ಕಮ್ಯುನಿಸ್ಟ್ ಸಿದ್ಧಾಂತಗಳನ್ನು ಪ್ರಚಾರ ಮಾಡಿದವು. ಅದೇ ಸಮಯದಲ್ಲಿ ಅವರು ರಾಷ್ಟ್ರೀಯ ಚಳುವಳಿ ಮತ್ತು ರಾಷ್ಟ್ರೀಯ ಕಾಂಗ್ರೆಸ್‌ನ ಅವಿಭಾಜ್ಯ ಅಂಗವಾಗಿ ಉಳಿದರು. ಅಂತರ ರಾಷ್ಟ್ರೀಯ ಮಟ್ಟದ ಹೋರಾಟಗಳಿಂದ ಜಾಗೃತರಾದ ಇವರು ರಾಷ್ಟ್ರೀಯತೆ ಮತ್ತು ಸಾಮ್ರಾಜ್ಯಶಾಹಿ ವಿರೋಧಿಗಳನ್ನು ಸಾಮಾಜಿಕ ನ್ಯಾಯದೊಂದಿಗೆ ಸಂಯೋಜಿಸುವ ಅಗತ್ಯವನ್ನು ಒತ್ತಿ ಹೇಳಿದರು. ಅದರೊಂದಿಗೆ ಬಂಡವಾಳಶಾಹಿಗಳು ಮತ್ತು ಭೂ ಮಾಲೀಕರ ದಬ್ಬಾಳಿಕೆಯ ವಿರುದ್ಧ ಧ್ವನಿ ಎತ್ತಿದ್ದರು.

ಭಾರತಕ್ಕೆ ಸ್ವಾತಂತ್ರ್ಯ ಪ್ರಾಪ್ತಿಯಾದ ನಂತರ ಅಧಿಕಾರವನ್ನು ನಡೆಸುತ್ತಿದ್ದ ಕಾಂಗ್ರೆಸ್ ಸರ್ಕಾರದ ಸರ್ವಾಧಿಕಾರದ ವಿರುದ್ಧ ಸಮಾಜವಾದಿಗಳು ಹೋರಾಟವನ್ನು ಸಂಘಟಿಸಿದರು. ರಾಜತಂತ್ರ ಪ್ರಬಲವಾಗಿ ಜನತಂತ್ರವನ್ನು ಕಡೆಗಣಿಸಿದ್ದನ್ನು ಸಮಾಜವಾದಿಗಳು ಕಟುವಾಗಿ ಟೀಕಿಸಿದ್ದರು. ಅವರು ಪ್ರಜಾಪ್ರಭುತ್ವದ ಅಂಗಗಳಾದ ಸಂಸತ್ತು, ನ್ಯಾಯಾಲಯ, ಆಡಳಿತ ಮೂರು ಸಂವಿಧಾನಬದ್ಧವಾಗಿ ಕಾರ್ಯ ನಿರ್ವಹಿಸುವಂತಹ ವಾತಾವರಣವು ದೇಶದಲ್ಲಿ ಸೃಷ್ಟಿಯಾಗಬೇಕೆಂದು ಆಶಿಸಿದ್ದರು. ರಾಜಕಾರಣದಲ್ಲಿ ಭ್ರಷ್ಟಾಚಾರ ಮತ್ತು ಸರ್ವಾಧಿಕಾರವನ್ನು ನಿಗ್ರಹಿಸಲು ಜಯಪ್ರಕಾಶ್ ನಾರಾಯಣರವರು ಮಹಾಚಳುವಳಿಯೊಂದನ್ನು ಸಂಘಟಿಸಿದರು. ಇವರ

ಜೊತೆಗೆ ನರೇಂದ್ರದೇವ, ಅಚ್ಯುತ ಪಟವರ್ಧನ್, ಕೃಪಲಾನಿ ಮುಂತಾದವರು ಕೈಜೋಡಿಸಿದರು. ಈ ಚಳುವಳಿಯು ಕರ್ನಾಟಕದ ರಾಜಕೀಯದ ಮೇಲೆ ಅಗಾಧವಾ ಪ್ರಭಾವವನ್ನು ಉಂಟುಮಾಡಿತ್ತು.

ಮೈಸೂರು ಕಾಂಗ್ರೆಸ್ ಪಕ್ಷವು ಕಾಂಗ್ರೆಸ್ ಪಕ್ಷದಲ್ಲಿದ್ದ ಬ್ರಾಹ್ಮಣ ಯಜಮಾನಿಕೆಯನ್ನು ನಿರಂತರವಾಗಿ ಹತೋಟಿಯಲ್ಲಿಟ್ಟಿತ್ತು. ಈ ಬಗೆಯ ಬ್ರಾಹ್ಮಣೇತರ ಚಳುವಳಿಯ ಪರಿಣಾಮವಾಗಿಯೆ 1947ರಲ್ಲಿ ಕೆ.ಸಿ. ರೆಡ್ಡಿರವರು ಮೈಸೂರು ರಾಜ್ಯದ ಪ್ರಥಮ ಮುಖ್ಯಮಂತ್ರಿಯಾದರು. ಕಮ್ಯುನಿಸ್ಟ್ ಪಕ್ಷವನ್ನು ಹೊರತುಪಡಿಸಿದರೆ ಕರ್ನಾಟಕದಲ್ಲಿ ಕಾಣಿಸಿಕೊಂಡ ಕಾಂಗ್ರೇಸ್ಸೇತರವಾದಿ ಪಕ್ಷಗಳು ಸಾಮಾನ್ಯವಾಗಿ ಬ್ರಾಹ್ಮಣೇತರ ಸೈದ್ಧಾಂತಿಕ ನೆಲೆಯನ್ನು ಮೈಗೂಡಿಸಿಕೊಂಡಿದ್ದವು. ಸಮಾಜವಾದಿ ಚಳುವಳಿ ಕರ್ನಾಟಕದಲ್ಲಿ ರಾಜಕೀಯಾರ್ಥಿಕ ಹೋರಾಟಗಳೊಂದಿಗೆ ತನ್ನ ವಿಶಾಲ ನೆಲೆಗಟ್ಟಿನ ಮೂಲಕ ಗುರುತಿಸಿಕೊಂಡಿತು. ಇಂತಹ ಹೋರಾಟವನ್ನು ಕರ್ನಾಟಕದಲ್ಲಿ ಮೊದಲ ಬಾರಿಗೆ ಕಮಲಾದೇವಿ ಚಟ್ಟೋಪಾಧ್ಯಾಯರವರು ಆರಂಭಿಸಿದರು. ಅವರು ರೈತ ಮತ್ತು ಕಾರ್ಮಿಕ ಹೋರಾಟಗಳನ್ನು ಸಂಘಟಿಸುವ ಮೂಲಕ ಸಮಾಜವಾದಿ ಮುನ್ನಡೆಗೆ ಚಾಲನೆಯನ್ನು ನೀಡಿದರು.

ಗೋಪಾಲಗೌಡರು ವಿಧಾನಸಭೆಯ ಒಳಗಿನಿಂದ ಸಮಾಜವಾದಿ ಆಶಯಗಳನ್ನು ಪ್ರತಿಪಾದಿಸಿದ ಹಾಗೂ ಆಳುವ ಸರ್ಕಾರದ ನೀತಿ ನಿರೂಪಣೆಯ ಮೇಲೆ ಬೀರಿದ ಪ್ರಭಾವವನ್ನು ನಿರಾಕರಿಸುವಂತಿಲ್ಲ. ಆದರೆ ಅವರು ವರ್ಗ ಮತ್ತು ಸಾಮಾಜಿಕ ಹೋರಾಟಗಳಿಂದ ದೂರವಿದ್ದರು. ಒಬ್ಬ ಹಿರಿಯ ಸಮಾಜವಾದಿ ಹಾಗೂ ರಾಷ್ಟ್ರೀಯ ಮಂಡಳಿಯ ಸದಸ್ಯರಾಗಿದ್ದ ಗೋಪಾಲಗೌಡರು ಸಮಗ್ರ ರಾಜ್ಯವನ್ನೇ ಕಾರ್ಯಕ್ಷೇತ್ರವಾಗಿ ಸಂಘಟಿಸಿದ್ದರೆ ಅದರ ಪರಿಣಾಮವನ್ನು ಊಹಿಸಲು ಸಾಧ್ಯವಾಗುತ್ತಿತ್ತು. ರಾಜ್ಯದ ಬಹುತೇಕ ಸಕ್ರಿಯ ರಾಜಕಾರಣದಲ್ಲಿ ತೊಡಗಿಸಿಕೊಂಡ ಸಮಾಜವಾದಿಗಳು 1960ರ ದಶಕ ನಂತರ ಸಾಮಾಜಿಕ ಹೋರಾಟಗಳಿಂದ ವಿಮುಖರಾಗಲು ಸಂಸದೀಯ ಆಸಕ್ತಿಯೇ ಕಾರಣವಾಗಿತ್ತು. ಗೋಪಾಲಗೌಡ ಮತ್ತು ನಾಗಪ್ಪನವರ ನೇತೃತ್ವದಲ್ಲಿ ಸಮಾಜವಾದಿ ಪಕ್ಷವು ತನ್ನ ತಾತ್ವಿಕ ನಿಲುವನ್ನು ಪ್ರಚಾರಪಡಿಸಿತು. ಈ ಅವಧಿಯಲ್ಲಿ ಬಂಗಾರಪ್ಪ, ರಾಮಕೃಷ್ಣ ಹೆಗಡೆ, ಬೊಮ್ಮಾಯಿ ಮತ್ತು ಎಸ್. ನಿಜಲಿಂಗಪ್ಪನವರು ಸಮಾಜವಾದಿ ಚಿಂತನೆಗಳ ಬೆಳವಣಿಗೆಗೆ ಸಹಕಾರಿಯಾದರು.

ದೇವರಾಜ ಅರಸರು ತಮ್ಮ ಭೂಸುಧಾರಣಾ ನೀತಿಯ ಮೂಲಕ ಸಮಾಜವಾದಿ ಚಿಂತನೆಯಲ್ಲಿ ಒಲವಿರುವುದನ್ನು ಸ್ಪಷ್ಟಪಡಿಸಿದ್ದರು. ಇವರ ಆಡಳಿತಾವಧಿಯಲ್ಲಿ

ಬಸವಲಿಂಗಪ್ಪನವರ ಮಲಹೋರುವ ಪದ್ಧತಿಯನ್ನು ನಿಷೇಧಿಸಿದ್ದರು. ದೇವರಾಜ ಅರಸರು ಹಾವನೂರು ಆಯೋಗದ ವರದಿಯನ್ನು ಪರಿಶೀಲಿಸಿ ಹಿಂದುಳಿದ ವರ್ಗಗಳಿಗೆ ಮೀಸಲಾತಿ ಸೌಲಭ್ಯವನ್ನು ಕಲ್ಪಿಸಿದರು. ಇವರಲ್ಲದೇ ಜಾರ್ಜ್ ಫರ್ನಾಂಡೀಸ್, ಕೆ.ಜಿ. ಮಹೇಶ್ವರಪ್ಪ, ಎಚ್.ಡಿ. ದೇವೇಗೌಡ, ಜೆ.ಹೆಚ್. ಪಟೇಲರು ಸಮಾಜವಾದಿ ಹಿನ್ನಲೆಯ ರಾಜಕಾರಣಕ್ಕೆ ಒತ್ತು ನೀಡಿದರು. ಸಿ.ಪಿ.ಐ.ಎಮ್ ಪಕ್ಷವು ತುರ್ತು ಪರಿಸ್ಥಿತಿಯನ್ನು ವಿರೋಧಿಸಿತಾದರೂ ಕರ್ನಾಟಕದಲ್ಲಿ ತುರ್ತು ವಿರೋಧವು ಚಳುವಳಿಯ ಸ್ವರೂಪವನ್ನು ಪಡೆಯುವಂತಾಗಲು ಸಮಾಜವಾದಿ ವೈಚಾರಿಕ ನೆಲೆಗಳೇ ಪ್ರಧಾನವಾಗಿದ್ದವು. ಸಮಾಜವಾದಿ ರಾಜಕಾರಣಿಗಳ ಮೇಲೆ ಬುದ್ಧ, ಬಸವಣ್ಣ, ಪೆರಿಯಾರ್ ಮತ್ತು ಅಂಬೇಡ್ಕರ್ ಮುಂತಾದವರ ತತ್ವ ಮತ್ತು ಆದರ್ಶಗಳು ಅಗಾಧವಾದ ಪ್ರಭಾವವನ್ನು ಬೀರಿದ್ದವು.

1960 ರಿಂದ ಮುನ್ನೆಲೆಗೆ ಬಂದ ಸಮಾಜವಾದಿ ರಾಜಕಾರಣವು ತುಮಕೂರಿನ ರಾಜಕೀಯದ ತನ್ನದೇ ಆದ ಛಾಪನ್ನು ಮೂಡಿಸಿದೆ. ಸಮಾಜವಾದಿಗಳು ತಮ್ಮ ತತ್ವ ಮತ್ತು ಆದರ್ಶಗಳಿಗೆ ಬದ್ಧವಾಗಿ ತುಮಕೂರಿನ ಜನಪರ ಹೋರಾಟಗಳಲ್ಲಿ ಸಕ್ರಿಯರಾಗಿದ್ದರು. ರೈತ ಮತ್ತು ಕಾರ್ಮಿಕರ ಸಮಸ್ಯೆ, ನೀರಿನ ಸಮಸ್ಯೆ, ಸಾಮಾಜಿಕ ಅನಿಷ್ಟ ಆಚರಣೆಗಳು, ಭೂ ಸಮಸ್ಯೆ ಮುಂತಾದವುಗಳನ್ನು ಬಗೆಹರಿಸುವಲ್ಲಿ ಸಮಾಜವಾದಿ ರಾಜಕಾರಣವು ಪ್ರಬಲ ಅಸ್ತ್ರವಾಗಿ ಬಳಕೆಯಾಯಿತು. ಈ ಸೃಜನಶೀಲ ರಾಜಕಾರಣವು ಕಾಂಗ್ರೆಸ್ ಸರ್ವಾಧಿಕಾರಿ ಧೋರಣೆಗೆ ಪರ್ಯಾಯ ರಾಜಕೀಯ ವ್ಯವಸ್ಥೆಯನ್ನು ರೂಪಿಸಿಕೊಟ್ಟಿತ್ತು.

ಜಯರಾಮ್, ರೇವಣ್ಣ, ಕೆ.ಆರ್. ನಾಯಕ್, ಗೋವಿಂದರಾಜು, ಹಾಗಲವಾಡಿ ಚನ್ನಪ್ಪ, ಮಧುಗಿರಿ ನಾರಾಯಣಶೆಟ್ಟಿ, ಪಾವಗಡ ಶಂಕರನಾರಾಯಣ, ಕೃಷ್ಣಸ್ವಾಮಿ, ಹಮ್ಮಸಂದ್ರ ಶಿವಣ್ಣ, ಬಿ.ಪಿ. ಗಂಗಾಧರ ಮತ್ತು ಕೆ. ಮಲ್ಲಣ್ಣ ತುಮಕೂರಿನ ಕಮುನಿಸ್ಟ್ ಪಕ್ಷದ ಪ್ರಮುಖ ನಾಯಕರಾಗಿದ್ದರು. ಕೆ. ಲಕ್ಕಪ್ಪನವರು ಪ್ರಜಾ ಸೋಷಿಯಲಿಸ್ಟ್ ಪಕ್ಷದ ನಾಯಕರಾಗಿ ರಾಜ್ಯ ಮತ್ತು ರಾಷ್ಟ್ರ ರಾಜಕಾರಣದಲ್ಲಿ ಖ್ಯಾತಿಯನ್ನು ಪಡೆದಿದ್ದರು. ಜನತಾ ಪರಿವಾರ ಪಕ್ಷದ ಭಾಸ್ಕರಪ್ಪ, ಸಿ. ವೀರಣ್ಣ, ವೈ.ಕೆ. ರಾಮಯ್ಯ, ಡಿ. ನಾಗರಾಜಯ್ಯ, ಸತ್ಯನಾರಾಯಣ, ರಾಜವರ್ಧನ್, ಚೆನ್ನಿಗಪ್ಪ ಮತ್ತು ಮೊಡ್ಲೆಗೌಡ ಮುಂತಾದವರು ಸಮಾಜವಾದಿ ಚಿಂತನೆ ಮತ್ತು ಸಾಮಾಜಿಕ ಕಾರ್ಯಗಳ ಮೂಲಕ ರಾಜಕಾರಣದಲ್ಲಿ ಗುರುತಿಸಿಕೊಂಡಿದ್ದರು. ವೈ.ಕೆ. ರಾಮಯ್ಯನವರ ನಿರಂತರ ಹೋರಾಟದ ಫಲವಾಗಿ ತುಮಕೂರು ಜಿಲ್ಲೆಯು ಹೇಮಾವತಿ ನದಿ ನೀರಿನ ಸೌಲಭ್ಯವನ್ನು ಪಡೆಯಿತು. ಈ ಹೋರಾಟದ ನಾಯಕತ್ವವನ್ನು ವಹಿಸಿದ್ದ ರಾಮಯ್ಯನವರು ಹೇಮಾವತಿಯ ಹರಿಕಾರ ಎಂಬ

ಖ್ಯಾತಿಗೆ ಭಾಜನರಾದರು.

ಒಟ್ಟಾರೆ ತುಮಕೂರು ಜಿಲ್ಲೆಯಲ್ಲಿ ಸಮಾಜವಾದಿ ಚಿಂತನೆಗಳು ಶ್ರಮಿಕ ವರ್ಗದ ಅಭಿವೃದ್ಧಿಗೆ ಮತ್ತು ಪ್ರಜಾಪ್ರಭುತ್ವ ವ್ಯವಸ್ಥೆಯ ಉಳಿಯುವಿಕೆಗೆ ಪೂರಕವಾಗಿದ್ದವು. ಪ್ರಸ್ತುತ ಕಾಲಘಟ್ಟದಲ್ಲಿ ರಾಜಕೀಯ ಧೃವೀಕರಣದಿಂದಾಗಿ ಸಮಾಜವಾದಿ ರಾಜಕೀಯವು ಬಲಹೀನವಾಗುತ್ತಿದೆ. ಅದರ ಸ್ಥಾನದಲ್ಲಿ ಭಾರತೀಯ ಜನತಾ ಪಕ್ಷವು ಪ್ರಾಬಲ್ಯವನ್ನು ಸಾಧಿಸಿದೆ. ಕರ್ನಾಟಕ ರಾಜಕೀಯದಲ್ಲಿ ಸಮಾನತೆ, ಸಹಬಾಳ್ವೆ ತತ್ವವನ್ನು ಉಪದೇಶಿಸಿದ ಸಮಾಜವಾದಿ ರಾಜಕಾರಣದ ಮರು ಅಸ್ತಿತ್ವವು ಅವಶ್ಯಕವಾದುದಾಗಿದೆ.

**ಪರಾಮರ್ಶನ ಗ್ರಂಥಗಳು:**


1. ಅಭಿಶಂಕರ್ ಕೆ. (ಸಂ). (1967). ತುಮಕೂರು ಜಿಲ್ಲಾ ಗ್ಯಾಸೆಟಿಯರ್. ಕರ್ನಾಟಕ ಸರ್ಕಾರ. ಬೆಂಗಳೂರು.
2. ಕಾಳೇಗೌಡ ನಾಗವಾರ ಮತ್ತು ನಟರಾಜ್ ಹುಳಿಯಾರ್. (1996). ಸ್ವಾತಂತ್ರ್ಯ ಅಂತರ್ಜಲ. ಕರ್ನಾಟಕ ಸರ್ಕಾರ. ಬೆಂಗಳೂರು.
3. ಕೃಷ್ಣಸ್ವಾಮಿ ಅಯ್ಯಂಗಾರ್ ಹೆಚ್. ಎಸ್. (1999). ಮಾನ್ಯರು–ಸಾಮಾನ್ಯರು. ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ. ಮೈಸೂರು.
4. ಗೋಪಾಲ್ ಕೃಷ್ಣ (ಅನು). (1982). ಸಮಾಜವಾದದ ಪರಿಚಯ. ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾನಿಲ. ಬೆಂಗಳೂರು.
5. ಪೀರ್‌ಬಾಷಾ ಬಿ. (2012). ಸಮಾಜವಾದಿ ಹೋರಾಟಗಾರರ ಸಂದರ್ಶನ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ. ಹಂಪಿ.
6. ವೆಂಕಟಪ್ಪಗೌಡ ಕೋಣಂದೂರು. (1981). ಜೀವಂತ ಜ್ವಾಲೆ (ಶಾಂತವೇರಿ ಗೋಪಾಲಗೌಡ ಸ್ಮಾರಕ ಗ್ರಂಥ). ಯಶಸ್ವಿ ಪ್ರಕಾಶನ. ಬೆಂಗಳೂರು.